ಬಂದಿರುವುದೆ?

ಇ. ಬಂದಿದ್ದರೆ, ಪ್ರಸ್ತಾಪಿಸಲಾದ ಈ ಯೋಜನೆಗೆ ಸರಕಾರವು ಅನುಮೋದನೆ ನೀಡಿರುವುದೇ? ನೀಡದೇ ಇದ್ದಲ್ಲಿ ಮುಂದೆ ಯಾವಾಗ ಅನುಮೋದನೆ ನೀಡಲಾಗುವುದು?

ಈ. ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು? ಯಾವ ಹಂತದೊಳಗಾಗಿ ಮುಗಿಸಲಾಗುವುದು? ನಿರ್ದಿಷ್ಟ ಕಾಲಮಿತಿ ತಿಳಿಸುವುದು?

ಉ. ಈ ಯೋಜನೆಯ ಅನುಷ್ಠಾನಕ್ಕೆ ತಗಲುವ ಖರ್ಚು ಎಷ್ಟು? ಇದನ್ನು ಯಾವ ಮೂಲದಿಂದ ಭರಿಸಲಾಗುವುದು?

ಉತ್ತರ

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಈ. ಉದ್ಭವಿಸುವುದಿಲ್ಲ.

ಉ. ಉದ್ಭವಿಸುವುದಿಲ್ಲ.

ಬಿಜಾಪುರ ಜಿಲ್ಲೆಯಲ್ಲಿ ಜಲ ನಿರ್ಮಲ ಯೋಜನೆಯ ಅನುಷ್ಠಾನ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1159(1321)

ಸದಸ್ಯರ ಹೆಸರು: ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ(ತಿಕೋಟ)

ಉತ್ತರಿಸುವವರು: ಶ್ರೀ ಎಂ.ವೈ.ಘೋರ್ಪಡೆ(ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಪ್ರಶ್ನೆ

1. ರಾಜ್ಯದಲ್ಲಿ ಜಲ ನಿರ್ಮಲ ಎಂಬ ಯೋಜನೆಯನ್ನು ಜಾರಿಗೆ ತರಲಾಗಿದೆಯೇ? ಈ ಯೋಜನೆಯ ಉದ್ದೇಶ ಹಾಗೂ ಅವಧಿ ಎಷ್ಟು?

2. ಈ ಯೋಜನೆಯನ್ನು ರಾಜ್ಯದಲ್ಲಿ ಸರ್ಕಾರ ಯಾವ ಯಾವ ಜಿಲ್ಲೆಗಳಲ್ಲಿ ಪ್ರಾರಂಭಿಸಲು ಯೋಜಿಸಿದೆ?

ಇದಕ್ಕಾಗಿ ಅವಶ್ಯವಿರುವ ಅನುದಾನವನ್ನು ಯಾವ ಯಾವ ಮೂಲಗಳಿಂದ ಭರಿಸಲಾಗುವುದು? ಯೋಜನೆಗೆ ಬೇಕಾದ ಅನುದಾನ ಎಷ್ಟು?

3. ಸದರಿ ಯೋಜನೆಯನ್ನು ವಿಜಾಪುರ ಜಿಲ್ಲೆಯಲ್ಲಿಯೂ ಅನುಷ್ಠಾನಗೊಳಿಸಲಾಗುವುದೆ?

4. ವಿಜಾಪರ ಜಿಲ್ಲೆಯ ಯಾವ ಯಾವ ಗ್ರಾಮ ಪಂಚಾಯತ್‌ಗಳು ಮತ್ತು ಎಷ್ಟು ಗ್ರಾಮಗಳು ಈ ಯೋಜನೆಗೆ ಒಳಪಡುತ್ತಿದೆ?

5. ಇದರ ಅನುಷ್ಠಾನಕ್ಕಾಗಿ ಪ್ರತಿ ಗ್ರಾಮ ಪಂಚಾಯತ್‌ಗೆ ನೀಡಿದ ಅನುದಾನ ಎಷ್ಟು?

6. ಈ ಯೋಜನೆಗಳು ಕೃಷ್ಣ ಬೇಸಿನ್ ಅಡಿ ಬರಲಿದೆ ಎಂಬುದಿದ್ದು ಇದರ ಅರ್ಥ ಮತ್ತು ಸಾರಾಂಶವೇನು?

ಉತ್ತರ

1. ಹೌದು. 2001-2002ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಹೇಳಿದ ಪ್ರಕಾರ ಸರ್ಕಾರವು ''ಜಲ ನಿರ್ಮಲ'' ಯೋಜನೆಯ ಅನುಷ್ಠಾನಕ್ಕೆ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 145 ಪಿಪಿಎಂ 98 ದಿನಾಂಕ 19-6-2001 ಮೂಲಕ ಮಂಜೂರಾತಿ ನೀಡಿದೆ. ದಿನಾಂಕ 18-12-2001ರಂದು ಈ ಯೋಜನೆಗೆ ವಿಶ್ವಬ್ಯಾಂಕ್ ಒಪ್ಪಿಗೆ ನೀಡಿರುತ್ತದೆ ಹಾಗೂ ಸದರಿ ಯೋಜನೆಯನ್ನು ದಿನಾಂಕ 11-02-2002ರಂದು ಆರಂಭಿಸಲಾಗಿದೆ. ದಿನಾಂಕ 8ನೇ ಮಾರ್ಚ್ 2002 ರಂದು ಸದರಿ ಯೋಜನೆಯ ಕರಾರು ಪತ್ರಕ್ಕೆ ಸಹಿ ಮಾಡಲಾಗಿದೆ.

ಈ ಯೋಜನೆಯ ಉದ್ದೇಶಗಳು ಈ ಕೆಳಗಿನಂತಿವೆ.

ಅ. ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸೇವೆಯ ಗುಣಮಟ್ಟವನ್ನು ಸುಧಾರಿಸುವುದು ಹಾಗೂ ಈ ಕೆಳಗಿನವುಗಳನ್ನು ಸಾಧಿಸುವುದು.

* ಸ್ವಯಂ ಚಾಲಿತ ಅಭಿವೃದ್ಧಿ ಪಡಿಸುವುದು.

* ಬಡತನ ಕಡಿಮೆ ಮಾಡುವುದು

* ಗ್ರಾಮೀಣ ಜನರಿಗೆ ಸ್ವಯಂಚಾಲಿತ ಆರೋಗ್ಯ ಮತ್ತು ನೈರ್ಮಲ್ಯದ

ಸೌಲಭ್ಯಗಳನ್ನು ಒದಗಿಸುವುದು.

* ಸಾಮಾನ್ಯವಾಗಿ ಸಮುದಾಯವನ್ನು ಮತ್ತು ವಿಶೇಷವಾಗಿ ಗ್ರಾಮೀಣ ಬಡ ಜನರು ಹಾಗೂ ಮಹಿಳೆಯರನ್ನು ಈ ಕಾರ್ಯದಲ್ಲಿ ಭಾಗವಹಿಸುವಂತೆ ಮಾಡುವುದು ಮತ್ತು ಅವರುಗಳಿಗೆ ಅಧಿಕಾರ ನೀಡುವುದು.
* ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ವಿಧಾನವನ್ನು ಬಲಪಡಿಸುವುದು.

ಆ. ಸಮರ್ಪಕವಾದ ದೋರಣಾತ್ಮಕ ನೀತಿಯ ಚೌಕಟ್ಟು ಮತ್ತು ಕಾರ್ಯತಂತ್ರ ಯೋಜನೆಯನ್ನು ಗುರುತಿಸುವ ಮತ್ತು ಅನುಷ್ಠಾನಗೊಳಿಸುವ ಮೂಲಕ ನಿರಂತರವಾದ ನೀರು ಸರಬರಾಜು ಮತ್ತು ನೈರ್ಮಲ್ಯ ವಲಯವನ್ನು ಬಲಪಡಿಸುವುದು.

ಈ ಯೋಜನೆಯು 6 ವರ್ಷಗಳ ಅವಧಿಯದಾಗಿರುತ್ತದೆ. (ಜನವರಿ 2002ರಿಂದ ನವಂಬರ್ ಡಿಸೆಂಬರ್ 2007)

2. ಈ ಯೋಜನೆಯನ್ನು ರಾಜ್ಯದ ಈ ಕೆಳಕಂಡ 11 ಜಿಲ್ಲೆಗಳಲ್ಲಿ ಅನುಷ್ಠಾನಗೋಳಿಸಲು ಯೋಜಿಸಲಾಗಿದೆ.

1) ಉತ್ತರ ಕನ್ನಡ	2) ಬೆಳಗಾಂ	3) ಬಿಜಾಪುರ
4) ಬಾಗಲಕೋಟೆ	5) ಧಾರವಾಡ	6) ಗದಗ್
7) ಹಾವೇರಿ	8) ಗುಲ್ಬರ್ಗಾ	9) ಬೀದರ್
10) ರಾಯಚೂರು	11) ಕೊಪ್ಪಳ	

ಒಟ್ಟು ಯೋಜನೆಯ ಅಂದಾಜು ವೆಚ್ಚ 193.44 ಮಿಲಿಯನ್ ಅಮೇರಿಕನ್ ಡಾಲರ್‌ಗಳು. (ಅಂದಾಜು ರೂ. 1035.37 ಕೋಟಿಗಳು) 151.6 ಮಿಲಿಯನ್ ಅಮೇರಿಕನ್ ಡಾಲರ್‌ಗಳ ನೆರವನ್ನು ವಿಶ್ವಬ್ಯಾಂಕ್ ನೀಡುತ್ತದೆ. ಅಂದರೆ ಶೇಕಡಾ 78.4ರಷ್ಟು. ಇತರೆ ಬಂಡವಾಳ ವೆಚ್ಚದ ಪಾಲುದಾರಿಕೆ ಕರ್ನಾಟಕ ಸರ್ಕಾರ, ಗ್ರಾಮ ಪಂಚಾಯತಿ ಮತ್ತು ಬಳಕೆದಾರರ ವತಿಯಿಂದ ಭರಿಸಲಾಗುವುದು.

3. ಅನುಷ್ಠಾನಗೊಳಿಸಲಾಗುವುದು.

4. ಈ ಯೋಜನೆಯಲ್ಲಿ ಬೇಡಿಕೆಗೆ ಪ್ರತಿಕ್ರಿಯೆ ತೋರಿಸುವ ವ್ಯವಸ್ಥೆಯನ್ನು ಅಳವಡಿಸಲಾಗುವುದು. ಯೋಜನೆಯ ಸೌಲಭ್ಯಗಳನ್ನು ಪಡೆಯಲು ಇಚ್ಛಿಸುವಂತಹ ಗ್ರಾಮ ಪಂಚಾಯತಿಗಳು ಮತ್ತು ಗ್ರಾಮಗಳು ಯೋಜನಾ ನಿಯಮಗಳನ್ನು ಪಾಲಿಸುವ

ತಮ್ಮ ಇಚ್ಛೆಯನ್ನು ವ್ಯಕ್ತಪಡಿಸತಕ್ಕದ್ದು ಮತ್ತು ಜಿಲ್ಲಾ ಪಂಚಾಯಿತಿಗಳಲ್ಲಿ ನೊಂದಾಯಿಸಿಕೊಳ್ಳತಕ್ಕದ್ದು. ಯೋಜನೆಯ ಗ್ರಾಮ ಪಂಚಾಯತಿಗಳನ್ನು ಪಾರದರ್ಶಕ ಅರ್ಹತೆ ಮತ್ತು ಆದ್ಯತಾ ಪ್ರಮಾಣಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

5. ಗ್ರಾಮ ಪಂಚಾಯತಿಗಳಿಗೆ ಅನುದಾನ ವಾಸ್ತವಿಕ ನಕ್ಷೆ ಮತ್ತು ಅಂದಾಜು ಮೇಲೆ ಅವಲಂಬಿಸಿರುತ್ತದೆ.

6. ಹೆಚ್ಚಿನ ಯೋಜನೆಯ ಜಿಲ್ಲೆಗಳು ಮತ್ತು ಯೋಜನೆಯ ಪ್ರದೇಶ ಕೃಷ್ಣ ನದಿ ಕಣಿವೆಗೆ ಸೇರಿರುತ್ತವೆ, ಇದರ ಜಲಸಂಪನ್ಮೂಲಗಳು ಗ್ರಾಮೀಣ ನೀರು ಸರಬರಾಜು ಯೋಜನೆಯಲ್ಲಿ ಮುಖ್ಯ ಅಂಶವಾಗಿರುತ್ತದೆ.

ಬಿಜಾಪುರ ಜಿಲ್ಲೆಯಲ್ಲಿ ಸರಕಾರಿ ಪದವಿ ಕಾಲೇಜನ್ನು ಪ್ರಾರಂಭಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1160(1411)

ಸದಸ್ಯರ ಹೆಸರು: ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ(ತಿಕೋಟ)

ಉತ್ತರಿಸುವ ಸಚಿವರು: ಡಾ॥ ಜಿ.ಪರಮೇಶ್ವರ(ಉನ್ನತ ಶಿಕ್ಷಣ ಸಚಿವರು)

ಪ್ರಶ್ನೆ

ಅ) ಬಿಜಾಪುರ ಜಿಲ್ಲೆಯ ಶೈಕ್ಷಣಿಕ ರಂಗದಲ್ಲಿ ತುಂಬಾ ಹಿಂದುಳಿದ ಎನ್ನುವ ಅಂಶ ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಬಿಜಾಪುರ ಜಿಲ್ಲೆಯಲ್ಲಿ ಎಷ್ಟು ಸರಕಾರಿ ಪದವಿ ಕಾಲೇಜುಗಳಿವೆ?

ಇ) ಬಡತನದ ರೇಖೆಗಿಂತ ಕೆಳಗಿರುವ ಬಿಜಾಪುರ ಜಿಲ್ಲೆಯಲ್ಲಿ ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳು ಖಾಸಗಿ ಪದವಿ ಕಾಲೇಜುಗಳಿಗೆ ಸೇರುವುದು ತುಂಬಾ ಕಷ್ಟ ಎನ್ನುವುದನ್ನು ಸರ್ಕಾರ ಗಮನಿಸಿದೆಯೆ?

ಈ) ಹಾಗಿದ್ದರೆ, ಈ ಜಿಲ್ಲೆಯಲ್ಲಿ ಸರಕಾರಿ ಪದವಿ ಕಾಲೇಜಿನ ಅವಶ್ಯಕತೆಯಿರುವುದು ಸರ್ಕಾರ ಮನಗಂಡಿದೆಯೆ? ಹಾಗಿದ್ದಲ್ಲಿ, ಇದಕ್ಕಾಗಿ ಏನು ಕ್ರಮ ಕೈಗೊಳ್ಳಲಾಗುವುದು?

ಉ) ಹಾಗೂ ನಿರ್ದಿಷ್ಟವಾದ ಕಾಲಮಿತಿ ತಿಳಿಸುವುದು?